**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 23-08-2024.**

**ಪಾಟೀ ಸವಾಲು - 1 ನೇ ಪ್ರತಿವಾದಿ ಪರ ವಕೀಲರಿಂದ :**

**1)** ನಾನು 7 ನೇ ತರಗತಿ ಓದಿರುತ್ತೇನೆ. ನನಗೆ ಈ ದಾವೆಯ ಸಂಪೂರ್ಣ ಮಾಹಿತಿ ಇದೆ. ನಮ್ಮ ತಾಯಿ ದಾವೆ ದಾಖಲಿಸಿದ್ದು,ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದು ಸಾಕ್ಷಿಯು ಪುನಃ ನುಡಿಯುತ್ತಾರೆ. ನಮ್ಮ ತಂದೆಯ ಜೀವಿತಾವಧಿಯಲ್ಲಿ ಅವರು ನಮ್ಮ ತಾಯಿ ಮತ್ತು ನಾನು ಒಟ್ಟಿಗೇ ವಾಸಿಸುತ್ತಿದ್ದೆವು ಎಂದರೆ ಸರಿ. ನಮ್ಮ ತಂದೆ 2007 ರಲ್ಲಿ ಮರಣ ಹೊಂದಿರುತ್ತಾರೆ. ನಮ್ಮ ತಂದೆ ಅವಿದ್ಯಾವಂತರು. ಅವರಿಗೆ ಸಹಿ ಮಾಡಲು ಬರುತ್ತಿತ್ತು. ನಮ್ಮ ತಂದೆ ನಮ್ಮ ತಾತ ರಾಮಯ್ಯ ಅವರನ್ನು ಉಪನೋಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಹೋದ ವಿಚಾರವನ್ನು ನನಗೆ ಹೇಳಿದ್ದರು. ಸದರಿ ವಿಚಾರವನ್ನು ನನಗೆ 2003 ರಲ್ಲಿ ಹೇಳಿದ್ದರು. ನಮ್ಮ ತಾತನಿಗೆ ದಾವಾಸ್ವತ್ತು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ನಮ್ಮ ತಾತ ಮರಣ ಹೊಂದುವಾಗ ಗೊಬ್ಬರಗುಂಟೆಯಲ್ಲಿ ವಾಸವಿದ್ದರು. ಅವರನ್ನು ನಾನು ನೋಡಿರುತ್ತೇನೆ. ಅವರನ್ನು ಅವರ ಮರ ನಾಗರಾಜ ಸಾಕುತ್ತಿದ್ದರು ಎಂದರೆ ಸರಿಯಲ್ಲ. ನಾವೂ ಸಾಕುತ್ತಿದ್ದೆವು, ನಮ್ಮ ತಾತ ತೀರಿ ಹೊಗುವ ಒಂದು ವಾರ ಮೊದಲು ನಮ್ಮ ಮಾವ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತೇನೆ. ನಮ್ಮ ತಾತ ಮರಣ ಹೊಂದುವಾಗ ನನಗೆ 13 ವರ್ಷ ವಯಸ್ಸಾಗಿತ್ತು. ಆಗ ನನಗೆ ಅಷ್ಟು ತಿಳುವಳಿಕೆ ಇರಲಿಲ್ಲ ಎಂದರೆ ಸರಿ. ನಮ್ಮ ತಾತನವರಿಗೆ ಒಟ್ಟು ನಾಲ್ಕು ಜನ ಮಕ್ಕಳು. ನಮ್ಮ ತಾಯಿ 1 ನೇ ಪ್ರತಿವಾದಿ ಬಂದು ತೊಂದರೆ ಮಾಡುತ್ತಿದ್ದುದರಿಂದ ಈ ದಾವೆ ದಾಖಲಿಸಿರುತ್ತಾರೆ. ದಾವಾಸ್ವತ್ತಿನ ಸ್ವಾಧೀನದಲ್ಲಿ 1 ನೇ ಪ್ರತಿವಾದಿ ಇದ್ದಾರೆ ಎಂದರೆ ಸರಿಯಲ್ಲ. ನಮ್ಮ ತಾಯಿ ಇದ್ದಾರೆ ಎಂದು ನುಡಿಯುತ್ತೇನೆ. ನಮ್ಮ ತಾತ ನಮ್ಮ ತಾಯಿಯ ಹೆಸರಿಗೆ ದಾವಾಸ್ವತ್ತಿನ ಬಗ್ಗೆ ವಿಲ್ ನಾಮೆ ಮಾಡಿಕೊಟ್ಟಿರುತ್ತಾರೆ. ಸದರಿ ವಿಲ್ ನಾಮೆಯ ಬಗ್ಗೆ ನಮ್ಮ ತಾತ ಮತ್ತು

ನಮ್ಮ ತಂದೆ ನನಗೆ ತಿಳಿಸಿದ್ದರು. ಸದರಿ ವಿಚಾರವನ್ನು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತೇನೆ. ನಮ್ಮ ತಂದೆ ಸಹಿ ಮಾಡಿದ ಬೇರೆ ದಾಖಲೆಗಳನ್ನು ನಾನು ನೋಡಿರುತ್ತೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯ ಸರ್ವೆ ಸಂಖ್ಯೆ 77 ಆಗಿರುತ್ತದೆ. ಸದರಿ ಸರ್ವೆ ಸಂಖ್ಯೆಯ ಒಟ್ಟು ವಿಸ್ತೀರ್ಣ ಗೊತ್ತಿಲ್ಲ. ಈ ದಾವೆಯನ್ನು 35 ಗುಂಟೆ ಜಮೀನಿನ ಬಗ್ಗೆ ವಾದಿ ಸಲ್ಲಿಸಿರುತ್ತಾರೆ. ದಾವಾ ಸ್ವತ್ತಿನ ಚೆಕ್ಕುಬಂದಿಯನ್ನು ನನಗೆ ಹೇಳಲು ಸಾಧ್ಯವಿಲ್ಲ. ನಾನು ವಿಲ್ ನಾಮೆಯನ್ನು ನೋಡಿರುತ್ತೇನೆ. ನಮ್ಮ ಅಜ್ಜ 2016 ರಲ್ಲಿ ಸದರಿ ವಿಲ್ ನಾಮೆಯನ್ನು ನೀಡಿದ್ದು ಅದನ್ನು ಓದಿ ನಮ್ಮ ತಾಯಿಗೆ ತಿಳಿಸಿರುತ್ತೇನೆ. ಸದರಿ ವಿಲ್ ನಾಮೆಯನ್ನು ನಾವು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ತಂದೆ ಸೇರಿ ಸದರಿ ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಾತನಿಗೆ ಕಾಯಿಲೆ ಇರುವ ಬಗ್ಗೆ ಗೊತ್ತಿದ್ದರೂ ಸಹ ಸುಳ್ಳು ಮಾಹಿತಿ ನೀಡಿ ಸದರಿ ದಾಖಲೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಾತ ಮಾತನಾಡುತ್ತಿದ್ದರು. ಅವರಿಗೆ ಓದಲು ಬರೆಯಲು ಬರುತ್ತಿರಲಿಲ್ಲ. ವಿಲ್ ನಾಮೆ ಮಾಡಿಕೊಡುವ ಸಮಯದಲ್ಲಿ ಅವರಿಗೆ ಕಾಯಿಲೆ ಇತ್ತು ಎಂದರೆ ಸರಿಯಲ್ಲ. ಅವರಿಗೆ ವಯಸ್ಸಾಗಿತ್ತು ಮತ್ತು ಓಡಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಅವರನ್ನು ಉಪನೋಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಹೊಗಿದ್ದರು ಎಂದರೆ ಸರಿಯಲ್ಲ. ನಮ್ಮ ತಾತನೇ ಕರೆದುಕೊಂಡು ಹೊಗಿದ್ದರು ಎಂದು ನುಡಿಯುತ್ತೇನೆ. ವಿಲ್ ನಾಮೆ ಮಾಡಿಕೊಟ್ಟ ವಿಚಾರ ನಮ್ಮ ತಾತ ಉಳಿದ ಮಕ್ಕಳಿಗೆ 2016 ರಲ್ಲಿ ಗೊತ್ತಾಯಿತು. ಅವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುತ್ತೇವೆ. ಸದರಿ ವಿಲ್ ನಾಮೆಯನ್ನು ಆನಂದಪ್ಪ ಅವರು ಬರೆದಿದ್ದರು. ನಮ್ಮ ತಂದೆ ನಮ್ಮ ತಾತನನ್ನು ಮೋಸದಿಂದ ಕರೆದುಕೊಂಡು ಹೋಗಿ ನಿ.ಪಿ.1 ನ್ನು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮ ತಾತ 2 ನೇ ಪ್ರತಿವಾದಿಯ ವಿರುದ್ಧ ಒಂದು ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಾತ ದಾವಾಸ್ವತ್ತಿನ ಮಾಲೀಕರಲ್ಲದೇ

ಇದ್ದರೂ ಸಹ ಸದರಿ ದಾಖಲೆಯನು ಸೃಷ್ಟಿ ಮಾಡಿದ್ದೇವೆ ಎದರೆ ಸರಿಯಲ್ಲ. ನಮ್ಮ ತಾತನಿಗೆ ವಿಲ್ ನಾಮೆ ಮಾಡಲು ಅಧಿಕಾರ ಇರಲಿಲ್ಲ, ಸದರಿ ದಾಖಲೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ದಾವಾಆಸ್ತಿಯನ್ನು ಹೊಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿಯನ್ನು ನೋಡಿರುವುದಿಲ್ಲ. ನಾನು 1 ನೇ ಪ್ರತಿವಾದಿಯನ್ನೂ ಸಹ ನೋಡಿರುವುದಿಲ್ಲ. ನಾನು ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**